ಮಕ್ಕಳಿಗಾಗಿ ಬೈಬಲ್
ಅರ್ಪಿಸುವ

# ಯೆರೆಮೀಯ ಕಣ್ಣೀರಿನ ಮನುಷ್ಯನು



ಬರಹಗಾರರು: Edward Hughes

ಚಿತ್ರಲೇಖಕರು: Jonathan

ಅಳವಡಿಸುವವರು: Mary-Anne S.

ಪದ್ಮಾ ಸ್ಕೈಲೇಸ್: Vinay Shirol

ತಯಾರಕರು: Bible for Children
www.M1914.org

©2014 Bible for Children, Inc.
ಅನುಮತಿ: ಈ ಕಥೆಯನ್ನು ಉಪಯೋಗಿಸುವದಕ್ಕೆ ಮತ್ತು ಮುದ್ರಣಹಾಕುವದಕ್ಕೆ ನಿಮಗೆ ಅನುಮತಿ ಇರುವದು. ಆದರೆ, ಇದನ್ನು ನೀವು ಯಾವ ಕಾರಣಕ್ಕಾಗಿಯೂ ಮಾರಾಟಮಾಡಬಾರದು.

ಯೆರೆಮೀಯನು ಯೆಹೂದ್ಯ ರಾಜ್ಯದ
ಧರ್ಮನಿಷ್ಟ ಮನೆಯಲ್ಲಿ ಜನಿಸಿದನು
ಅವನ ತಂದೆ ಹಿಲ್ಕೀಯನು ಒಬ್ಬ
ಯಾಜಕನಾಗಿದ್ದನು ಅವರ ಕುಟುಂಬ
ಅನಾತೋತ್ ಎಂಬ ಊರಿನಲ್ಲಿ
ವಾಸಿಸುತ್ತಿದ್ದರು. ಅದು ಯೆರೂಸಲೇಮಿನಿಂದ
ಬಹಳ ದೂರವೇನಿರಲಿಲ್ಲ. ಬಹುಶಃ
ಯೆರೇಮೀಯನ ತಂದೆ ತಾಯಿಗಳು
ಅವನು ಸಹ ಒಬ್ಬ ಯಾಜಕನಾಗುವನೆಂದು
ಅಂದುಕೊಂಡಿರಬಹುದು. ಆದರೆ ದೇವರ
ಯೋಚನೆ ಬೇರೆಯಾಗಿತ್ತು.





ಯೆರೆಮೀಯನ ಜನನದ ಕಾಲದಲ್ಲಿ
ದೇವರ ಜನರು ದೇವರ ವಾಕ್ಯದಂತೆ
ನಡೆದುಕೊಳ್ಳುತ್ತಿರಲಿಲ್ಲ ಬಹಳಷ್ಟು
ಮಟ್ಟಿಗೆ ಎಲ್ಲರೂ ರಾಜನಿಂದ ಹಿಡಿದು
ದಿನ ಕೆಲಸದವನ ತನಕ, ದೇವರ
ಪರಿಶುದ್ಧ ಆಲಯದಲ್ಲಿಲ್ಯೂ ಸಹ ಅನ್ಯ
ದೇವರುಗಳನ್ನು ಆರಾಧಿಸಿದರು!



ಯೆರೇಮೀಯನು
ಯೌವನಸ್ಥನಾದಾಗ
ದೇವರು ಅವನೊಂದಿಗೆ
ಮಾತಾಡಿದನು “ನಾನು
ನಿನ್ನನ್ನು ಗರ್ಭದಲ್ಲಿ
ರೂಪಿಸುವುದಕ್ಕೆ ಮುಂಚೆ
ನಿನ್ನನ್ನು ತಿಳಿದಿದ್ದೆನು” ಎಂದು ದೇವರು ಯೆರೆಮೀಯನಿಗೆ ಹೇಳಿದನು
“ಹಾಗೂ ನೀನು ನನಗೋಸ್ಕರವಾಗಿ ಮಾತಾಡುವಿ ಎಂದು ಹೇಳಿದನು”.

ದೇವರ ಕರೆಯು ಯೆರೆಮೀಯನನ್ನು ಹೆದರಿಸಿತು ಎಂದು ಕಾಣುತ್ತದೆ “ಅಯ್ಯೋ ಕರ್ತನಾದ ಯೆಹೋವನೇ! ಎಂದು ಕೂಗಿದನು. ನಾನು ಮಾತು ಬಲ್ಲವನಲ್ಲ, ನಾನು ಇನ್ನೂ ಬಾಲಕನು”, ಅವನು ಬಾಲಕನಿಗಿಂತ ಹೆಚ್ಚಾಗಿದ್ದನು ಅವನಿಗೆ ಇಪ್ಪತ್ತು  ವರುಷಗಳು ಆಗಿತ್ತು. ಆದರೆ ಯೆರೆಮೀಯನು ದೇವರಿಗೋಸ್ಕರ ತನ್ನ ಸುತ್ತ ಇದ್ದ ದುಷ್ಟಕಾರ್ಯಗಳ ವಿರುದ್ಧವಾಗಿ ಮಾತಾಡಬಲ್ಲನು ಎಂದು ಯೋಚಿಸಲಿಲ್ಲ.



“ಅಂಜಬೇಡ” ಎಂದು ದೇವರು ಯೆರೆಮೀಯನಿಗೆ ಭರವಸೆ ಕೊಟ್ಟನು: “ನಾನು ನಿನ್ನನ್ನು ಕಳುಹಿಸಿದಲ್ಲಿ ಹೋಗು ನಾನು ಹೇಳಿದ್ದನ್ನು ಹೇಳು, ನಾನು ನಿನ್ನೊಂದಿಗೆ ಇದ್ದೇನೆ ಹಾಗೂ ನಾನು ನಿನ್ನನ್ನು ರಕ್ಷಿಸುವೆನು”



ನಂತರ ದೇವರು ಒಂದು ವಿಶೇಷ ಕಾರ್ಯವನ್ನು ಮಾಡಿದನು ಹಾಗೂ ಯೆರೆಮೀಯನ ಬಾಯನ್ನು ಮುಟ್ಟಿದನು.

ದೇವರು ಯೆರೇಮಿಯನಿಗೆ ಶಕ್ತಿ, ಧೈರ್ಯ ಹಾಗೂ ಜ್ಞಾನವನ್ನು ಕೊಟ್ಟನು. ಅವನು ಧೈರ್ಯವಾಗಿ ಮಾತಾಡತೊಡಗಿದನು. ದೇವರು ಅವರನ್ನು ಪ್ರೀತಿಸುತ್ತಾನೆ ಹಾಗೂ ಅವರಿಗೆ ಸಹಾಯ ಮಾಡಬೇಕೆಂದಿದ್ದಾನೆ ಎಂದು ಜನರಿಗೆ ನೆನಪು ಮಾಡಿದನು. ಆದರೆ ಯಾರು ಅವನಿಗೆ ಕಿವಿಗೊಡಲಿಲ್ಲ ರಾಜನು ಸಹ ಕೇಳಲಿಲ್ಲ.



ಯಾಜಕರು ಸಹ ಕೋಪಿಸಿಕೊಂಡು ಅವನಿಗೆ ದೇವರ ಬಗ್ಗೆ ಮಾತಾಡುವುದನ್ನು ನಿಲ್ಲಿಸಿಬಿಡು ಎಂದು ಹೇಳಿದರು. ಅಲ್ಲಿದ್ದ ಸುಳ್ಳು ಪ್ರವಾದಿಗಳು ಯೆರೆಮೀಯನು ನಿಜವನ್ನು ಹೇಳುತ್ತಿಲ್ಲವೆಂದು ಹೇಳಿದರು.



ಯೆರೆಮೀಯನು ಜನರಿಗೆ ಒಂದು ಘಟನೆಯನ್ನು ನೆನಪಿಸಿದನು. ಸುಮಾರು ನೂರು ವರ್ಷಗಳ ಹಿಂದೆ, ಇಸ್ರಾಯೇಲ ರಾಜ್ಯದ ಉತ್ತರ ದಿಕ್ಕಿನವರು ದೇವರನ್ನು ತೊರೆದೇ ಬಿಟ್ಟರು. ಅವರ ಶತ್ರುಗಳಾದ ಅಸ್ಸೇರಿಯರು ಅವರನ್ನು ಆಕ್ರಮಿಸಿ ಎಲ್ಲಾ ಇಸ್ರಾಯೇಲರನ್ನು ದೂರದ ಪ್ರಾಂತಕ್ಕೆ ಒಯ್ಯಲ್ಪಟ್ಟರು.





ಈಗ ದಕ್ಷಿಣ ರಾಜ್ಯದ
ಯೆಹೂದ್ಯ ಜನರು
ದೇವರನ್ನು ತೊರೆದುಬಿಟ್ಟರು.
ಶತ್ರು ಸೈನ್ಯ ಈಗಾಗಲೇ
ಹೊರಟಿತ್ತು! ದೇವರು
ಆತನ ಜನರನ್ನು ಆಕ್ರಮಿಸಿ
ದೇಶಭ್ರಷ್ಟರನ್ನಾಗಿ
ಮಡುವನೋ?

ಜನರು ಅವರ ವಿಗ್ರಹಗಳನ್ನು ನಂಬುತ್ತಿದ್ದರು. ವಿಗ್ರಹಗಳು ಅವರನ್ನು ಶತ್ರುಗಳಿಂದ ರಕ್ಷಿಸುತ್ತದೋ? ಇಲ್ಲ! ದೇವರು ಮಾತ್ರವೇ ಅವರನ್ನು ರಕ್ಷಿಸಬಲ್ಲನು. ಜನರು ಯೆರೆಮೀಯನ ಮೇಲೆ ಕೋಪಿಸಿಕೊಂಡರು. ಅವರು ಅವನನ್ನು ಕೊಲ್ಲಲು ಸಂಚು ಹಾಕಿದರು. ಆದರೆ ದೇವರು ಆತನ ಸೇವಕನನ್ನು ರಕ್ಷಿಸಿದನು.



ಕೊನೆಗೂ! ದೇವರು ಹೇಳಿದ ಸಂಗತಿ, ಯೆರೆಮೀಯನನ್ನು ಆಶ್ಚರ್ಯ ಪಡಿಸಿರಬಹುದು. ದೇವರು “ಈ ಜನರಿಗಾಗಿ ಪ್ರಾರ್ಥಿಸಬೇಡ ಅವರು ನನ್ನ ಸಹಾಯಕ್ಕಾಗಿ ಕೂಗಿದಾಗ ನಾನು ಕಿವಿಗೊಡೆನು” ಎಂದನು.



ಯೆರೆಮೀಯನು ಅರಸನಿಗೆ
ನೀನು ಬಾಬೆಲಿನ ಸೈನ್ಯದ
ಜೊತೆಯಲ್ಲಿರು ಯುದ್ಧದಲ್ಲಿ
ಸೋಲುವಿ ಎಂದು ಎಚ್ಚರಿಸಿದನು.
ಅರಸನು ಕೋಪಿಸಿಕೊಂಡು
ಸೆರೆಮನೆಗೆ ಹಾಕಿಸಿದನು.
ಸೆರೆಮನೆಯಲ್ಲಿಯೂ ಸಹ,
ಯೆರೆಮೀಯನು ಪ್ರಚಾರ
ಮಾಡುತ್ತಾ ದೇವರನ್ನು
ನಂಬುತ್ತಾ ಬಂದನು.





ಸೆರೆಮನೆಯಿಂದ ಹೊರಗೆ ಬಂದ ನಂತರ ಯೆರೆಮಿಯನು ಅರಸನಿಗೆ ಹಾಗೂ ಜನರಿಗೆ ಪ್ರಚಾರ ಮಾಡಿದನು. ಅದೇನೆಂದರೆ ಅವರು ದೇವರ ಕಡೆಗೆ ತಿರುಗಿಕೊಂಡು ಅವರ ವಿಶ್ವಾಸವನ್ನು ಆತನಲ್ಲಿಡಬೇಕೆಂದು ಹೇಳಿದನು. ಈ ಬಾರಿ ಅರಸನು ಯೆರೆಮೀಯಾನನ್ನು ಕೆಸರು ತುಂಬಿದ ಕಾರಾಗೃಹದಲ್ಲಿ ಇರಿಸಿದನು.

ಆದರೆ ದೇವರು ಅರಸನ ಹೃದಯದಲ್ಲಿ ಕಾರ್ಯ ಮಾಡುತ್ತಿದ್ದನು. ಅವನು ರಹಸ್ಯವಾಗಿ ಯೆರೆಮೀಯಾನನ್ನು ಪಾರು ಮಾಡಿ ದೇವರು ಅರಸನ ಮುಖಾಂತರ ಏನು ಮಾಡಬೇಕೆಂದಿದ್ದಾನೆ ಎಂದು ಕೇಳಿದನು “ನೀನು ಸೆರೆಗೆ ಒಳಗಾದರೆ ಜೀವಿಸುವಿ ಎಂದು ದೇವರು ಹೇಳುತ್ತಾನೆ.” ಎಂಬುದು ಉತ್ತರ.



ಬಾಬೆಲಿನ ಸೈನ್ಯವು ಯೆರೂಸಲೇಮನನ್ನು
ಹಾಗೂ ಯೂದಾಯದ ಎಲ್ಲವನ್ನು ಆಕ್ರಮಿಸಿದರು.
ಅವರು ಗೋಡೆಗಳನ್ನು ಎಲ್ಲ ಕಟ್ಟಡಗಳನ್ನು ಕೆಳಗೆ
ಉರುಳಿಸಿದರು ಹಾಗೂ ಎಲ್ಲವನ್ನು ಸುಟ್ಟುಬಿಟ್ಟರು
ದೇವರು ಆತನ ಜನರು
ಎಪ್ಪತ್ತು ವರುಷ ಸೆರೆಗೆ
ಒಳಗಾಗುವರೆಂದು
ಹೇಳಿದನು.



ನಂತರ ಆತನು
ತಿರುಗಿ ಅವರನ್ನು ವಾಗ್ದಾನ
ಮಾಡಿದ ದೇಶಕ್ಕೆ ಕರೆದು
ತರುವನೆಂದು ಹೇಳಿದನು.

# ಯೆರೆಮೀಯ ಕಣ್ಣೀರಿನ ಮನುಷ್ಯನು

ದೇವರ ವಾಕ್ಯವಾದ ಬೈಬಲ್‌ನಿಂದ ಆರಿಸಿದ ಕಥೆ

ಸಿಕ್ಕುವ ಭಾಗ

ಯೆರೆಮೀಯನು

**“ನಿನ್ನ ವಾಕ್ಯವಿವರಣೆಯಿಂದ ಜ್ಞಾನೋದಯವಾಗುವದು.”**
**ಕೀರ್ತನೆ 119:130**

# ಮುಕ್ತಾಯ

ಅದ್ಭುತನಾದ ದೇವರು ನಮ್ಮನ್ನು ಉಂಟು ಮಾಡಿರುವನೆಂದು ಮತ್ತು ನಾವು ಆತನನ್ನು ಕಂಡುಕೊಳ್ಳಬೇಕೆಂದು ದೇವರು ಇಷ್ಟಪಡುತ್ತಾನೆಂದು ಈ ಬೈಬಲ್ ಕಥೆಯು ತಿಳಿಸುತ್ತದೆ.

ನಾವು ಕೆಟ್ಟ ಕೆಲಸಗಳನ್ನು ಮಾಡಿರುವದು ದೇವರಿಗೆ ತಿಳಿದಿರುತ್ತದೆ. ಈ ಕೆಟ್ಟ ಕೆಲಸಗಳನ್ನು ದೇವರು ಪಾಪವೆಂದು ಕರೆಯುತ್ತಾನೆ. ಪಾಪದ ಶಿಕ್ಷೆಯು ಮರಣವಾಗಿದೆ. ಆದರೆ ನಮ್ಮ ಪಾಪದ ಶಿಕ್ಷೆಯನ್ನು ತನ್ನ ಮೇಲೆ ಹೊತ್ತುಕೊಂಡು ಶಿಲುಬೆಯ ಮೇಲೆ ಪ್ರಾಣ ಕೊಡಲು ದೇವರು ತನ್ನ ಒಬ್ಬನೇ ಮಗನಾದ ಯೇಸುಕ್ರಿಸ್ತನನ್ನು ಈ ಲೋಕಕ್ಕೆ ಕಳುಹಿಸಿಕೊಟ್ಟನು. ಯೇಸುಕ್ರಿಸ್ತನು ಸತ್ತವರೊಳಗಿಂದ ತಿರುಗಿ ಎದ್ದು ಬಂದು ಪರಲೋಕಕ್ಕೆ ಏರಿಹೋಗಿದ್ದಾನೆ. ನಿನ್ನ ಪಾಪದ ಶಿಕ್ಷೆಯನ್ನು ಯೇಸುಕ್ರಿಸ್ತನು ತೀರಿಸಿದ್ದಾನೆ. ಆತನು ನಿನ್ನ ಪಾಪಗಳನ್ನು ಕ್ಷಮಿಸುತ್ತಾನೆ. ಆದರೆ ನಿನ್ನ ಪಾಪಗಳನ್ನು ಕ್ಷಮಿಸಬೇಕೆಂದು ನೀನು ಆತನಿಗೆ ಕೇಳಿಕೊಳ್ಳಬೇಕು. ಆತನು ಖಂಡಿತವಾಗಿ ನಿನ್ನ ಪಾಪಗಳನ್ನು ಕ್ಷಮಿಸುವನು ಮತ್ತು ಈಗಲೇ ನಿನ್ನ ಹೃದಯದೊಳಗೆ ಬಂದು ವಾಸಿಸಬಲ್ಲನು! ನೀನು ಆತನೊಂದಿಗೆ ಯಾವಾಗಲೂ ಜೀವಿಸುವಿ.

ನೀನು ಈ ಸತ್ಯವನ್ನು ನಂಬುವದಾದರೆ, ದೇವರಿಗೆ ಈ ಮಾತುಗಳನ್ನು ಹೇಳು:
ಕರ್ತನಾದ ಯೇಸುವೇ, ನೀನು ದೇವರು ಆಗಿರುವಿ ಎಂದು ಮತ್ತು ನನ್ನ ಪಾಪಕ್ಕಾಗಿ ನಿನ್ನ ಪ್ರಾಣವನ್ನು ಕೊಡಲು ಮನುಷ್ಯನಾಗಿ ಬಂದಿರುವಿ ಎಂದು ನಂಬುತ್ತೇನೆ. ಈಗ ನೀನು ಸತ್ತವರೊಳಗಿಂದ ಎದ್ದು ಬಂದು ಯಾವಾಗಲೂ ಜೀವಿಸುವವನಾಗಿರುವಿ, ನನ್ನ ಪಾಪಗಳನ್ನು ದಯವಿಟ್ಟು ಕ್ಷಮಿಸಿ ನನ್ನ ಹೃದಯದೊಳಗೆ ಬಂದು ವಾಸಿಸು. ಹೀಗೆ ಹೊಸ ಜೀವವನ್ನು ಪಡೆದುಕೊಂಡು ಒಂದು ದಿನ ನಾನು ನಿನ್ನ ಬಳಿಗೆ ಬಂದು ನಿನ್ನೊಂದಿಗೆ ಯಾವಾಗಲೂ ಇರುವೆನು. ನಿನಗೆ ವಿಧೇಯನಾಗುವದಕ್ಕೆ ಮತ್ತು ನಿನ್ನ ಮಗನಾಗಿ ಜೀವಿಸುವದಕ್ಕೆ ನನಗೆ ಸಹಾಯಮಾಡು. ಆಮೆನ್.

ನೀನು ಪ್ರತಿದಿನವೂ ಬೈಬಲ್ ಓದು ಮತ್ತು ಪ್ರಾರ್ಥನೆಯಲ್ಲಿ ದೇವರೊಂದಿಗೆ ಮಾತಾಡು!
ಯೋಹಾನ 3:16